**<u>ಮಧ್ಯಂತರ ಅರ್ಜಿ ನಂ.5 ರಿಂದ 7 ರ ಮೇಲೆ ಆದ ಆದೇಶದ ಮೇರೆಗೆ</u>**

**<u>ಸಾಕ್ಷಿಯನ್ನು ಇಂದು ದಿ.13.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ.SMB ವಕೀಲರಿಂದ</u>**

ನಾನು ಈ ಕೆಳಗಿನಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

| ಅ. ನಂ | ದಾಖಲೆಗಳ ವಿವರ | ನಿಶಾನೆ |
|---|---|---|
| 1 | ಅಲಕೊಪ್ಪರ ಗ್ರಾಮದ ಸ.ನಂ.11/p1 ಕ್ಷೇತ್ರ 14 ಎಕರೆ 12 ಗುಂಟೆ ಜಮೀನಿನ ಗೇಣಿ ಮತ್ತು ಪಹಣಿ ಪತ್ರಿಕೆ | 5 |
| 2 | 1 ನೇ ಎದುರುದಾರರು ದಿನಾಂಕಃ 15.11.2022 ರಂದು ಹೊರಡಿಸಿದ ಆದೇಶದ ದೃಢೀಕೃತ ನಕಲು | 6 |
| 3 | ಹೆಸ್ಕಾಂರವರು ನೀಡಿದ ಸೇವಾ ಪ್ರಮಾಣ ಪತ್ರ | 7 |

ಆದ್ದರಿಂದ, ಎಲ್ಲ ದಾಖಲೆಗಳನ್ನು ಪರಿಶೀಲಿಸಿ ನನ್ನ ಅರ್ಜಿಯನ್ನು ಪುರಸ್ಕರಿಸಲು ಪ್ರಾರ್ಥಿಸುತ್ತೇನೆ.

**<u>ಪಾಟೀ ಸವಾಲುಃ ಎದುರುದಾರರ ಪರವಾಗಿಃ</u>**

10) ನಿ.ಪಿ.5 ರಿಂದ 7 ದಾಖಲೆಗಳ ಕುರಿತು ನನಗೆ ಮಾಹಿತಿ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. 1 ನೇ ಎದುರುದಾರರು ಕಲಂ.11(1) ರಡಿ ನೊಟೀಸ ನೀಡುವ ಕಾಲಕ್ಕೆ ನಮ್ಮ ಜಮೀನು ಒಣಬೇಸಾಯದ ಜಮೀನು ಆಗಿತ್ತು ಎಂದು ಸೂಚಿಸುವುದು ಸರಿಯಲ್ಲ. 1 ನೇ ಎದುರುದಾರರು ನಮ್ಮ ಜಮೀನು ಭೂಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ನಮ್ಮ ಜಮೀನಿಗೆ ಭೇಟಿ ನೀಡಿ ಜಂಟಿ ಸರ್ವೆ ಮಾಡಿರುತ್ತಾರೆ ಎನ್ನುವುದು ನಿಜ. ನಮ್ಮ ಜಮೀನು ನೀರಾವರಿ ಜಮೀನು ಇರುತ್ತದೆ ಎಂದು ಹೇಳಿ 1 ನೇ ಎದುರುದಾರರ ಕಛೇರಿಗೆ ತಕರಾರನ್ನು ಸಲ್ಲಿಸಿರುವುದಿಲ್ಲ. 1 ನೇ ಎದುರುದಾರರು ನಮ್ಮ ಜಮೀನು ಒಣಬೇಸಾಯದ ಜಮೀನು ಎಂದು ಪರಿಗಣಿಸಿ ನಿ.ಆರ್.4 ರಂತೆ ಐತೀರ್ಪು ಘೋಷಿಸಿರುತ್ತಾರೆ ಎನ್ನುವುದು ನಿಜ. ನಿ.ಪಿ.1 ರಲ್ಲಿ RR ನಂಬರ ನಮೂದಿಸಿರುವುದಿಲ್ಲ ಎನ್ನುವುದು ನಿಜ. ಸರಕಾರದಿಂದ ಹೆಚ್ಚುವರಿ ಪರಿಹಾಧನ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ನಿ.ಪಿ.7 ದಾಖಲೆಯನ್ನು ಸೃಷ್ಠಿ ಮಾಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ಸಾಮಾನ್ಯವಾಗಿ ಸೇವಾ ಪ್ರಮಾಣ ಪತ್ರದಲ್ಲಿ ಇನ್ನು ಎಷ್ಟು ಹಣ ಸಂದಾಯ ಮಾಡಬೇಕಾಗಿರುತ್ತದೆ ಮತ್ತು ಎಷ್ಟು ವಿದ್ಯುತನ್ನು ಉಪಯೋಗಿಸಿರುತ್ತಾರೆ ಎಂಬುದನ್ನು ನಮೂದಿಸುತ್ತಾರೆ ಎನ್ನುವುದು ನಿಜ. 2015 ರಿಂದ

ಇಲ್ಲಿಯವರೆಗೂ ನಾವು ವಿದ್ಯುತ್ ಬಿಲ್ಲನ್ನು ಸಂದಾಯ ಮಾಡಿದ ಕುರಿತು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ. ಸರಿ ಅದೆ.

3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ.